ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 133-144
©*IIMRD*, Mysuru
IIMRD JOURNALS
www.iimrd.com

# ಸರ್ಕಾರಿ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುವ ಮಕ್ಕಳ ಸಮಸ್ಯೆಗಳು

**ಮಹೇಶ. ಜಿ[*] ಮತ್ತು ಡಾ. ಎಸ್. ಯಶೋದ[**]**
[*]ಸಂಶೋಧನಾ ವಿದ್ಯಾರ್ಥಿ ; [**]ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು
ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

***ಸಾರಾಂಶ (Abstract)***

*ಭಾರತ ದೇಶ ವಿಶ್ವದಲ್ಲೇ ಅತಿ ಹೆಚ್ಚು ಮಕ್ಕಳನ್ನು ಹೊಂದಿರುವ ರಾಷ್ಟ್ರವಾಗಿದೆ. 2011ರ ಜನಗಣತಿ ವರದಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ 47.21 ಕೋಟಿ (ಶೇ.39.0) ಮಕ್ಕಳಿದ್ದಾರೆ. ಭಾರತಲ್ಲಿ ಅತ್ಯಂತ ಸಂದಿಗ್ಧ ಮತ್ತು ಅಪಾಯದ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಮತ್ತು ಆರೈಕೆ ಹಾಗೂ ರಕ್ಷಣೆ ಅವಶ್ಯವಿರುವ ದೊಡ್ಡ ಸಂಖ್ಯೆಯ ಮಕ್ಕಳಿದ್ದಾರೆ. ಹಾಗಾದರೆ ಆರೈಕೆ ಮತ್ತು ರಕ್ಷಣೆಯ ಒಳಪಟ್ಟಿರುವ ಮಕ್ಕಳು ಎಂದರೆ ಯಾರು? ಸರ್ಕಾರಿ ಬಾಲಮಂದಿರಗಳಲ್ಲಿ ಅಂತಹ ಮಕ್ಕಳನ್ನು ಏಕೆ ಇರಿಸಲಾಗುತ್ತದೆ? ಮಕ್ಕಳು ಸರ್ಕಾರಿ ಬಾಲಮಂದಿರಗಳ ಅಭಿರಕ್ಷೆಗೆ ಬರಲು ಕಾರಣಗಳೇನು? ಸರ್ಕಾರಿ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುವ ಮಕ್ಕಳ ಸಮಸ್ಯೆಗಳೇನು? ಮತ್ತು ಅವುಗಳಿಗೆ ಪರಿಹಾರಕ್ರಮಗಳೇನು? ಎಂಬುದರ ಕುರಿತು ಈ ಲೇಖನವು ಓದುಗರ ತಿಳುವಳಿಕೆಯನ್ನು ವಿಸ್ತರಿಸುತ್ತದೆ.*

***ಮುಖ್ಯಪದಗಳು (Keywords)*:** ಬಾಲಮಂದಿರ, ಬಾಲನ್ಯಾಯ ಕಾಯ್ದೆ, ಮಕ್ಕಳ ಸಮಸ್ಯೆಗಳು, ಹಕ್ಕುಗಳ ಸಂರಕ್ಷಣೆ.

## ಪೀಠಿಕೆ

ಭಾರತದ ಭವಿಷ್ಯ ಯುವಜನಾಂಗ ಮತ್ತು ಮಕ್ಕಳ ಅಭಿವೃದ್ಧಿಯ ಮೇಲೆ ಅವಲಂಬಿತವಾಗಿದೆ. ಆದರೆ ಸ್ವಾತಂತ್ರ್ಯ ಬಂದ ಏಳು ದಶಕಗಳ ನಂತರವೂ ಮಕ್ಕಳು ಸಮಾಜದ ಅತ್ಯಂತ ದುರ್ಬಲ ವರ್ಗದವರಾಗಿದ್ದಾರೆ. ಸಾಮಾನ್ಯವಾಗಿ ಬೇರೆಯವರ ಕೃತ್ಯಕ್ಕೆ ಬಲಿಯಾಗಿ ಸಂತ್ರಸ್ತರಾದ ಹಾಗೂ ತಮ್ಮ ಕುಟುಂಬದಿಂದ, ಸಮಾಜದಿಂದಲೂ ನಿರ್ಲಕ್ಷ್ಯಕ್ಕೊಳಗಾಗಿ ಅಪಾಯದಲ್ಲಿರುವ 18 ವರ್ಷ ವಯೋಮಾನ ಪೂರ್ತಿಯಾಗದ ಮಕ್ಕಳನ್ನು, ಬಾಲನ್ಯಾಯ ಕಾಯ್ದೆ –2015ರಲ್ಲಿ 'ಆರೈಕೆ ಮತ್ತು ರಕ್ಷಣೆ ಅವಶ್ಯವುಳ್ಳ ಮಕ್ಕಳು' ಎಂದು ಕರೆಯಲಾಗುತ್ತದೆ. ಯುನಿಸೆಫ್ ಮಾಹಿತಿಯ ಪ್ರಕಾರ 2020ರ ಏಪ್ರಿಲ್ ತಿಂಗಳಿಗೆ ಭಾರತದಲ್ಲಿ 2,27,518 ಮಕ್ಕಳು ವಿವಿಧ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುತ್ತಾರೆ.[1]

[1] https://timesofindia.indiatimes.com/india/nearly-64-children-in-ccis-restored-to-families-since-sc-order-in-april/articleshow/79584157.cms

*Please cite this article as: ಮಹೇಶ ; ಎಸ್. ಯಶೋದ (2021*). ಸರ್ಕಾರಿ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುವ ಮಕ್ಕಳ ಸಮಸ್ಯೆಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 133–144*

ಕರ್ನಾಟಕ ರಾಜ್ಯದಲ್ಲಿ 2020 ಏಪ್ರಿಲ್ ತಿಂಗಳಿಗೆ 30,000 ಮಕ್ಕಳು ವಿವಿಧ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುತ್ತಾರೆ. ಸರ್ಕಾರವು ಬಾಲನ್ಯಾಯ ಕಾಯ್ದೆ –2015ರ ಅನ್ವಯ ಪೋಷಣೆ ಮತ್ತು ರಕ್ಷಣೆ ಅವಶ್ಯವುಳ್ಳ ಮಕ್ಕಳಿಗಾಗಿ ಪುನರ್ವಸತಿ ಒದಗಿಸಿ ಕಾಪಾಡಿ, ನಂತರ ಸಮಾಜದಲ್ಲಿ ಪುನ:ಸ್ಥಾಪಿಸಲು ಜಿಲ್ಲಾವಾರು ಗಂಡು ಮಕ್ಕಳ ಮತ್ತು ಹೆಣ್ಣು ಮಕ್ಕಳ ಸರ್ಕಾರಿ ಬಾಲಮಂದಿರಗಳನ್ನು ಸ್ಥಾಪಿಸಿದೆ. ಈ ಸರ್ಕಾರಿ ಬಾಲಮಂದಿರವು ಮಕ್ಕಳ ರಕ್ಷಣೆ ಮತ್ತು ಆರೈಕೆ ಮಾಡುವ ಸರ್ಕಾರದ ಬಹುಮುಖ್ಯ ಸಾಂಸ್ಥಿಕ ವ್ಯವಸ್ಥೆಯಾಗಿದೆ. ಆದರೆ ಪ್ರಸ್ತುತದಲ್ಲಿ ಈ ಸರ್ಕಾರಿ ಬಾಲಮಂದಿರಗಳಲ್ಲಿನ ಅಧಿಕಾರಿಗಳ ತರಬೇತಿ ಮತ್ತು ಕೌಶಲ್ಯರಹಿತ ಅಸಮರ್ಥತೆಯಿಂದ ಮತ್ತು ಆಡಳಿತ ವೈಫಲ್ಯದಿಂದ ಹಾಗೂ ಮಕ್ಕಳ ಕಾಳಜಿಯುಳ್ಳ ಸೂಕ್ತ ಕಾನೂನು–ನೀತಿಕ್ರಮಗಳ ಕೊರತೆಯಿಂದ ರಕ್ಷಣೆ ಮತ್ತು ಆರೈಕೆಯಲ್ಲಿ ಬದುಕಬೇಕಾದ ಮಕ್ಕಳು ಸರ್ಕಾರಿ ಬಾಲಮಂದಿರದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

**ಆರೈಕೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳು ಅಥವಾ ನಿರ್ಲಕ್ಷಿತ ಮಕ್ಕಳು**

ಸಾಮಾನ್ಯವಾಗಿ ತಂದೆ–ತಾಯಿ ಅಥವಾ ಪೋಷಕರ ಅಥವಾ ಕುಟುಂಬದ ಕನಿಷ್ಠ ಆರೈಕೆ ಮತ್ತು ರಕ್ಷಣೆ ಇಲ್ಲದ ಮಕ್ಕಳನ್ನು ಆರೈಕೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳು ಎನ್ನುವರು. ಆದರೆ ನಿರ್ಧಿಷ್ಟವಾಗಿ ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ– 2015ರ ಪ್ರಕಾರ ಆರೈಕೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳನ್ನು ಕೆಳಗಿನಂತೆ ವ್ಯಾಖ್ಯಾನಿಸಬಹುದು.

- ಭಿಕ್ಷೆ ಬೇಡುತ್ತಿರುವ ಮಕ್ಕಳು, ತಂದೆ–ತಾಯಿ ಅಥವಾ ಪೋಷಕರಿಲ್ಲದ ಅನಾಥ ಮಕ್ಕಳು, ಮಕ್ಕಳ ಪಾಲಕರು ಮತ್ತು ಪೋಷಕರು ಅಪರಾಧವೆಸಗಿ ಕಾನೂನಿನ ಪ್ರಕಾರ ಶಿಕ್ಷೆಯಾಗಿ ಸೆರೆಮನೆವಾಸಿಯಾಗಿದ್ದರೆ ಅಂತಹವರ ಮಕ್ಕಳು, ಬೀದಿ ಬದಿ ವಾಸಿಸುತ್ತಿರುವ ಮಕ್ಕಳು, ಯಾವ ಮಕ್ಕಳಿಗೆ ತಮ್ಮದೇ ಆದ ಮನೆಯಿಲ್ಲವೋ ಅಥವಾ ವ್ಯವಸ್ಥಿತವಾದ ವಾಸಸ್ಥಳವಿಲ್ಲವೋ ಅಥವಾ ಮೇಲು ನೋಟಕ್ಕೆ ಕಂಡುಬರುವಂತೆ ಜೀವನ ನಿರ್ವಹಣೆಗೆ ಸೂಕ್ತ ಮಾರ್ಗವಿಲ್ಲವೋ ಅಂತಹ ಮಕ್ಕಳು.
- ಯಾವ ಮಕ್ಕಳ ತಂದೆ–ತಾಯಿ ಅಥವಾ ಪೋಷಕರು ತಮ್ಮ ಅಧೀನದಲ್ಲಿರುವ ಮಗುವಿಗೆ – ಅಗತ್ಯವಾಗಿರುವ ಮೂಲಭೂತ ಅಗತ್ಯಗಳು, ವೈದ್ಯಕೀಯ ಶಸ್ತ್ರ ಚಿಕಿತ್ಸೆ ಅಥವಾ ಆಸ್ಪತ್ರೆ ಉಪಚಾರದ ಬಗ್ಗೆ ಆಸಕ್ತಿ ಹೊಂದಿರುವುದಿಲ್ಲವೋ ಅಂತಹ ಮಕ್ಕಳು, ಯಾವ ಮಗುವಿನ ಮೇಲೆ ಹಲ್ಲೆಯಾಗಿದ್ದು ಗಾಯಗಳಾಗಿವೆಯೋ, ಶೋಷಣೆಗೆ, ದುರುಪಯೋಗಕ್ಕೆ ಒಳಪಟ್ಟಿದೆಯೋ, ಯಾವ ಮಗುವಿಗೆ ಕೊಲೆ ಬೆದರಿಕೆ ಅಥವಾ ದೈಹಿಕ ಹಲ್ಲೆ/ಗಾಯವಾಗುವ ಸಾಧ್ಯತೆಯಿದೆಯೋ ಅಂತಹ ಮಕ್ಕಳು
- ಇತರ ಮಕ್ಕಳು/ಮಗುವನ್ನು ಕೊಂದಿರುವ, ದುರುಪಯೋಗ, ನಿರ್ಲಕ್ಷ್ಯ ಮಾಡಿರುವ ಪ್ರಕರಣವಿದ್ದು, ಒಂದು ನಿರ್ಧಿಷ್ಟ ಮಗು ಅಥವಾ ಮಕ್ಕಳಿಗೆ ಕೊಲೆ/ದುರುಪಯೋಗ ಅಥವಾ ನಿರ್ಲಕ್ಷ್ಯ ಉಂಟಾಗುವ ಸಾಧ್ಯತೆಗಳಿದ್ದಲ್ಲಿ.

- ಮಾನಸಿಕ ಅಥವಾ ದೈಹಿಕ ಅಂಗವಿಕಲತೆಯಿಂದ ಬಳಲುತ್ತಿರುವ ಅಥವಾ ಅನಾರೋಗ್ಯದಿಂದಿರುವ ಅಥವಾ ಪ್ರಾಣಾಂತಕ ಕಾಯಿಲೆಯಿಂದ ಬಳಲುತ್ತಿದ್ದು ಯಾರೂ ಸಹ ನೋಡಿಕೊಳ್ಳಲು ಇಲ್ಲದ ಮಕ್ಕಳು, ತಂದೆ–ತಾಯಿ ಅಥವಾ ಪೋಷಕರು ಇರುವ ಅಥವಾ ಇಲ್ಲದಿರುವ ತ್ಯಜಿಸಲ್ಪಟ್ಟ ಮಕ್ಕಳು, ಯಾವ ಮಕ್ಕಳ ತಂದೆ–ತಾಯಿ ಅಥವಾ ಪೋಷಕರು ತಮ್ಮ ಮೇಲೆ ನಿಯಂತ್ರಣ ಹೊಂದಿರುವುದಿಲ್ಲವೋ ಇಲ್ಲವೇ ಅವರನ್ನು ಉತ್ತಮ ಪರಿಸರದಲ್ಲಿ ಬೆಳೆಸಲು ಸಮರ್ಥರಿಲ್ಲದಂತಹ ಸ್ಥಿತಿಯಲ್ಲಿದ್ದ ಮಕ್ಕಳು ನಿರ್ಲಕ್ಷಿತ ಮಕ್ಕಳಾಗಿರುವವರು ಎಂದು ತಿಳಿಯಬಹುದು, ತಪ್ಪಿಸಿಕೊಂಡಿರುವ ಅಥವಾ ಕಳೆದುಹೋಗಿರುವ, ಓಡಿ ಬಂದಿರುವ ಅಥವಾ ಬಿಟ್ಟು ಹೋಗಿರುವ (ಪೋಷಕರು ಪತ್ತೆಯಾಗದ) ಮಕ್ಕಳು, ತಂದೆ–ತಾಯಿಗಳು ಹೆಚ್‌ಐವಿ/ಏಡ್ಸ್‌ಗೆ ತುತ್ತಾಗಿ ಸಾವನ್ನಪ್ಪಿ ಅನಾಥರಾಗಿರುವ ಮಕ್ಕಳು ಅಥವಾ ಸ್ವತ: ಹೆಚ್‌ಐವಿ/ಏಡ್ಸ್‌ನಿಂದ ಬಳಲುತ್ತಿರುವ ಮಕ್ಕಳು.
- ಮತ್ತೊಬ್ಬ ವ್ಯಕ್ತಿಯ ಕೃತ್ಯ ಅಥವಾ ಲೋಪದಿಂದ ಅನ್ಯಾಯಯುತವಾಗಿ ದೈಹಿಕ ಅಥವಾ ಮಾನಸಿಕವಾಗಿ ಹಾನಿಗೊಳಗಾದ ಅಪಾಯದಲ್ಲಿರುವ ಸಂತ್ರಸ್ತ ಮಕ್ಕಳು ಕೂಡ ಆರೈಕೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳಾಗಿದ್ದಾರೆ. ಹದಿನೆಂಟು ವರ್ಷ ತುಂಬುವುದರೊಳಗೆ ಮದುವೆಗೆ ಗುರಿಯಾದ ಮಕ್ಕಳು, ಲೈಂಗಿಕ ದುರುಪಯೋಗ ಅಥವಾ ಶೋಷಣೆ, ಅತ್ಯಾಚಾರಕ್ಕೊಳಗಾದ ಮಕ್ಕಳು, ಮಾದಕದ್ರವ್ಯ ವ್ಯಸನಕ್ಕೆ ಒಳಗಾಗಿರುವ ಮಕ್ಕಳು, ಜೀತ ಪದ್ಧತಿ ಅಥವಾ ಬಲವಂತದ ದುಡಿಮೆಯಲ್ಲಿದ್ದ ಮಕ್ಕಳು, ವೇಶ್ಯವಾಟಿಕೆ ಅಥವಾ ಲೈಂಗಿಕ ಜಾಲದಲ್ಲಿ ಸಿಲುಕಿಕೊಂಡ ಮಕ್ಕಳು, ಸಾಗಾಣೆ ಅಥವಾ ಮಾರಾಟಕ್ಕೊಳಗಾದ ಮಕ್ಕಳು, ಸಶಸ್ತ್ರ ಸಂಘರ್ಷಗಳು, ನಾಗರಿಕ ಕ್ಷೋಭೆಗಳು ಅಥವಾ ನೈಸರ್ಗಿಕ ವಿಪತ್ತುಗಳಿಗೆ ಗುರಿಯಾಗಿರುವ ಮಕ್ಕಳು.

**ರಾಷ್ಟ್ರ ಮತ್ತು ರಾಜ್ಯದಲ್ಲಿ ಮಕ್ಕಳ ಜನಸಂಖ್ಯಾ ಚಿತ್ರಣ**

ಭಾರತದಲ್ಲಿ 18 ವರ್ಷದೊಳಗಿನ 47,21,11,477 ಮಕ್ಕಳಿದ್ದಾರೆ. ಇದರಲ್ಲಿ 24,74,89,356 ಗಂಡು ಮಕ್ಕಳಾದರೆ 22,46,22,121 ಹೆಣ್ಣು ಮಕ್ಕಳಾಗಿದ್ದಾರೆ. ಇದು ದೇಶದ ಒಟ್ಟು ಜನಸಂಖ್ಯೆಯ 39.0% ರಷ್ಟಿದೆ ಉಳಿದಂತೆ ವಯಸ್ಕರ ಜನಸಂಖ್ಯೆ 61% ರಷ್ಟಿದೆ. (73,87,43,500 ವಯಸ್ಕರು). ರಾಜ್ಯದಲ್ಲಿ ಭಾರತದ ಜನಗಣತಿ 2011ರ ಪ್ರಕಾರ 0–18 ವರ್ಷಗಳ ವಯಸ್ಸಿನ ಮಕ್ಕಳ ಸಂಖ್ಯೆ 2,07,29,561 ಆಗಿರುತ್ತದೆ. ಇದು ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ (6,10,95,287) ಶೇಕಡ 33.93ರಷ್ಟನ್ನು ಒಳಗೊಂಡಿದೆ. ಕರ್ನಾಟಕದ ಮಕ್ಕಳ ಜನಸಂಖ್ಯೆಯು ಲಿಂಗ ಸಂಯೋಜನೆ, ನಗರ–ಗ್ರಾಮಾಂತರ ವಿಭಜನೆ, ಸಾಮಾಜಿಕ ವರ್ಗೀಕರಣ ಮತ್ತು ವಯಸ್ಸಿನಾಧಾರಿತ ವಿತರಣೆಯಲ್ಲಿ ವೈವಿಧ್ಯಯುತ ಗುಣಲಕ್ಷಣಗಳಿಂದ ಕೂಡಿದೆ. ಉದಾಹರಣೆಗೆ, ಕರ್ನಾಟಕದ 2011ರ ಮಕ್ಕಳ ಒಟ್ಟು ಜನಸಂಖ್ಯೆಯಲ್ಲಿ ಶೇ 51.64ರಷ್ಟು ಗಂಡು ಮಕ್ಕಳು, ಶೇ. 63.39ರಷ್ಟು ಗ್ರಾಮೀಣ ಪ್ರದೇಶದವರು, ಶೇ. 19.06 ರಷ್ಟು ಪರಿಶಿಷ್ಟ ಜಾತಿಯವರು, ಶೇ. 7.80 ರಷ್ಟು ಪರಿಶಿಷ್ಟ ಪಂಗಡದವರು ಮತ್ತು ಶೇ 1.88 ರಷ್ಟು ದಿವ್ಯಾಂಗ ಚೇತನರಾಗಿರುತ್ತಾರೆ. ಒಟ್ಟು ಮಕ್ಕಳ ಜನಸಂಖ್ಯೆಯಲ್ಲಿ ಶೇ.29.59ರಷ್ಟು 0–5 ವರ್ಷ, ಶೇ. 47.71ರಷ್ಟು 6–14 ವರ್ಷ, ಶೇ.10.97 ರಷ್ಟು15–16 ವರ್ಷ ಮತ್ತು ಶೇ. 5.06ರಷ್ಟು 17–18 ವರ್ಷದ ವಯಸ್ಸಿನ ಗುಂಪಿನಲ್ಲಿರುತ್ತಾರೆ. ಈ ಪ್ರಕಾರ, ಕರ್ನಾಟಕ

ಮಕ್ಕಳ ಜನಸಂಖ್ಯೆಯಲ್ಲಿ ಅತಿಹೆಚ್ಚು ಪಾಲು 6–14 ವರ್ಷದ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳ ಜನಸಂಖ್ಯೆಯಾಗಿರುತ್ತದೆ.

**ಕರ್ನಾಟಕ ರಾಜ್ಯದ ಸರ್ಕಾರಿ ಬಾಲಮಂದಿರಗಳಲ್ಲಿರುವ ಮಕ್ಕಳ ಸಂಖ್ಯೆ**

ಮಕ್ಕಳ ರಕ್ಷಣಾ ನಿರ್ದೇಶನಾಲಯದ (2020) ವರದಿ ಪ್ರಕಾರ ರಾಜ್ಯದಲ್ಲಿ ಒಟ್ಟು 1209 ಮಕ್ಕಳು ಬಾಲಮಂದಿರುದ ರಕ್ಷಣೆ ಪಡೆದಿವೆ. ಈ ಮಕ್ಕಳಲ್ಲಿ 379 ಗಂಡು ಮಕ್ಕಳು, 615 ಹೆಣ್ಣು ಮಕ್ಕಳು ನೆಲೆಸಿದ್ದಾರೆ. ಈ ಮಕ್ಕಳಲ್ಲಿ 100 ಬುದ್ದಿಮಾಂದ್ಯ ಗಂಡು ಮಕ್ಕಳಿದ್ದು, 80 ಬುದ್ದಿಮಾಂದ್ಯ ಹೆಣ್ಣು ಮಕ್ಕಳಿದ್ದಾರೆ. ಬೆಂಗಳೂರಿನಲ್ಲಿ 0–5 ವಯೋಗುಂಪಿಗೆ ಸೇರಿದ 35 ಶಿಶುಗಳಿದ್ದಾರೆ. ಜಿಲ್ಲಾವಾರು ಗಮನಿಸಿದಾಗ ಅತಿ ಹೆಚ್ಚು ಮಕ್ಕಳು ಬೆಂಗಳೂರಿನ ಬಾಲ ಮಂದಿರುಗಳಲ್ಲಿ ಆಶ್ರಯ ಪಡೆದಿದ್ದರೆ, ಕಡಿಮೆ ಪ್ರಮಾಣದ ಮಕ್ಕಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಪಡೆದಿದ್ದಾರೆ.

ಕೋಷ್ಟಕ 1: **ಕರ್ನಾಟಕ ರಾಜ್ಯದ ಸರ್ಕಾರಿ ಬಾಲಮಂದಿರಗಳಲ್ಲಿರುವ ಮಕ್ಕಳ ಸಂಖ್ಯೆ**

| ಕ್ರಮ ಸಂಖ್ಯೆ | ಜಿಲ್ಲೆ | ಬಾಲಕರ ಸಂಖ್ಯೆ | ಬಾಲಕಿಯರ ಸಂಖ್ಯೆ | ಬುದ್ಧಿ ಮಾಂದ್ಯ ಬಾಲಕರು | ಬುದ್ಧಿ ಮಾಂದ್ಯ ಬಾಲಕಿಯರು | ಶಿಶು 0–5 | ಒಟ್ಟು ಮಕ್ಕಳ ಸಂಖ್ಯೆ |
|---|---|---|---|---|---|---|---|
| 1 | ಬಾಗಲಕೋಟೆ | 7 | 16 | – | – | – | 23 |
| 2 | ಬಳ್ಳಾರಿ | 14 | 22 | 40 | – | – | 76 |
| 3 | ಬೆಳಗಾವಿ | 14 | 14 | – | – | – | 28 |
| 4 | ಬೆಂಗಳೂರು | 37 | 34 | 60 | – | 35 | 166 |
| 5 | ಬೀದರ್ | 18 | 14 | – | – | – | 32 |
| 6 | ಚಾಮರಾಜನಗರ | 1 | 10 | – | – | – | 11 |
| 7 | ಚಿಕ್ಕಬಳ್ಳಾಪುರ | – | 24 | – | – | – | 24 |
| 8 | ಚಿಕ್ಕಮಗಳೂರು | 10 | 0 | – | – | – | 10 |
| 9 | ಚಿತ್ರದುರ್ಗ | 23 | 18 | – | – | – | 41 |
| 10 | ದಕ್ಷಿಣ ಕನ್ನಡ | 20 | – | – | – | – | 20 |
| 11 | ದಾವಣಗೆರೆ | 28 | 24 | – | – | – | 52 |
| 12 | ಧಾರವಾಢ | 12 | 21 | – | 48 | – | 81 |
| 13 | ಗದಗ | 10 | 18 | – | – | – | 28 |
| 14 | ಹಾಸನ | 31 | 51 | – | – | – | 82 |
| 15 | ಹಾವೇರಿ | 6 | 9 | – | – | – | 15 |
| 16 | ಕಲಬುರ್ಗಿ | 29 | 22 | – | 32 | – | 83 |

| | | | | | | | |
|---|---|---|---|---|---|---|---|
| 17 | ಕೊಡಗು | 12 | 32 | – | – | – | 44 |
| 18 | ಕೋಲಾರ | 20 | 12 | – | – | – | 32 |
| 19 | ಕೊಪ್ಪಳ | 9 | 7 | – | – | – | 16 |
| 20 | ಮಂಡ್ಯ | 11 | 22 | – | – | – | 33 |
| 21 | ಮೈಸೂರು | 12 | 50 | – | – | – | 62 |
| 22 | ರಾಯಚೂರು | 20 | 17 | – | – | – | 37 |
| 23 | ರಾಮನಗರ | – | 22 | – | – | – | 22 |
| 24 | ಶಿವಮೊಗ್ಗ | 17 | 22 | – | – | – | 39 |
| 25 | ತುಮಕೂರು | 6 | 31 | – | – | – | 37 |
| 26 | ಉಡುಪಿ | – | 34 | – | – | – | 34 |
| 27 | ಉತ್ತರ ಕನ್ನಡ | 3 | 3 | – | – | – | 6 |
| 28 | ವಿಜಯಪುರ | 9 | 26 | – | – | – | 35 |
| 29 | ಯಾದಗಿರಿ | – | 40 | – | – | – | 40 |
| | ಒಟ್ಟು | 379 | 615 | 100 | 80 | 35 | 1209 |

**ಮೂಲ: ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, 03–09–2020**

**ಮಕ್ಕಳು ಸಂತ್ರಸ್ತತೆ ಮತ್ತು ನಿರ್ಲಕ್ಷ್ಯತೆಕ್ಕೊಳಗಾಗಲು ಕಾರಣಗಳು**

ಕೌಟುಂಬಿಕ ವಿಘಟನೆ, ಮಕ್ಕಳಿಗೆ ತಂದೆ–ತಾಯಿಯರ ಪ್ರೀತಿ–ವಾತ್ಸಲ್ಯದ ಕೊರತೆ, ತಂದೆ–ತಾಯಿಯರ ಆದರ್ಶರಹಿತ ಜೀವನ, ತಂದೆ–ತಾಯಿಯರ ಮಧ್ಯಪಾನ, ವ್ಯಭಿಚಾರ, ಭ್ರಷ್ಟಾಚಾರ, ಜೂಜಾಟ, ಮಧ್ಯವ್ಯಸನದಂತಹ ದುಷ್ಚಟಗಳು, ಮಕ್ಕಳ ಮೇಲೆ ತಂದೆ–ತಾಯಿಯರ ಅತಿಯಾದ ನಿಯಂತ್ರಣ ಅಥವಾ ಅತಿಯಾದ ಮುದ್ದು, ಮಕ್ಕಳ ಕುರಿತ ಪೋಷಕರ ಬೇಜವಾಬ್ದಾರಿತನ, ತಂದೆ–ತಾಯಿಯ ಅಕಾಲ ಮರಣ, ಉದ್ಯೋಗಸ್ಥ ತಂದೆ–ತಾಯಿಯರು ಮಕ್ಕಳ ಭಾವನಾ ಜೀವನದ ಬಗ್ಗೆ ಪ್ರಾಮುಖ್ಯತೆ ಕೊಡಲಾಗದ ಸ್ಥಿತಿ, ತಂದೆ ಅಥವಾ ತಾಯಿ ಅನೈತಿಕ ಲೈಂಗಿಕ ಸಂಬಂಧ ಹೊಂದಿ ಏಡ್ಸ್‌ನಂತಹ ಮಾರಕ ಕಾಯಿಲೆಯನ್ನು ಕುಟುಂಬಕ್ಕೆ ಅಂಟಿಸುವುದು, ತಂದೆ–ತಾಯಿಯರಲ್ಲಿ ಮಕ್ಕಳಿದ್ದಾಗಲೇ ಬೇಗನೇ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವ ಧಾವಂತ, ತಂದೆ–ತಾಯಿಯರು ಗಂಭೀರ ಅಪರಾಧವೆಸಗಿ ಸೆರೆವಾಸದಲ್ಲಿರುವುದು, ತಂದೆ–ತಾಯಿಯರ ಕಳ್ಳತನದಂತಹ ಅಪರಾಧ ಪ್ರವೃತ್ತಿ, ಅನೈತಿಕ ಸಂಬಂಧದಿಂದ ಜನಿಸಿದ ಮಗುವನ್ನು ಬಿಸಾಡುವುದು ಮುಂತಾದ ಕೌಟುಂಬಿಕ ಕಾರಣಗಳ ಜೊತೆಗೆ ಇತರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ಕೂಡ ಕಾರಣವಾಗಿವೆ.

**ಸಾಮಾಜಿಕ ಕಾರಣ**

ಸಾಂಸ್ಕೃತಿಕವಾಗಿ ಒಪ್ಪಲಾಗಿರುವ ಕೆಲವು – ಸಿಡಿ ಎತ್ತುವುದು, ಬಾಲ್ಯವಿವಾಹ, ಬಸವಿ ಬಿಡುವುದು, ದೇವದಾಸಿ ಪದ್ಧತಿಯಂತಹ ಆಚರಣೆಗಳಿಂದ ಮಕ್ಕಳು ಶೋಷಣೆಗೊಳಗಾಗುತ್ತಾರೆ. ಮಕ್ಕಳ ಮೇಲೆ ಸಿನೆಮಾ ಮಾಧ್ಯಮಗಳ ನೇತ್ಯಾತ್ಮಕ ಪ್ರಭಾವಗಳು ಬೀರಿ ಪ್ರೀತಿ ಪ್ರೇಮದ ಬಲೆಯಲಿ ಸಿಲುಕುವುದು, ಮನೆ ಬಿಟ್ಟು ಸಾಹಸ ಪ್ರವೃತ್ತಿ ಮೆರೆವುದನ್ನು ಮಾಡುವರು. ಕೊಳಚೆ ಜನವಸತಿ ಪ್ರದೇಶದ ಜೀವನ ವ್ಯವಸ್ಥೆ, ಮಕ್ಕಳ ದುಷ್ಟಕೂಟದ ಸಹವಾಸ, ಮಕ್ಕಳು ಅಪರಾಧ ಪ್ರಕರಣಗಳಲ್ಲಿ ಸಿಲುಕಿಕೊಳ್ಳುವುದು ಅಥವಾ ಬಾಲಾಪರಾಧ ಕೃತ್ಯ ಮಾಡುವುದು, ನಗರೀಕರಣ ಮತ್ತು ಕೈಗಾರೀಕರಣದ ನೇತ್ಯಾತ್ಮಕ ಪರಿಣಾಮ, ಪಿತೃಪ್ರಾಧಾನ್ಯತೆ ಮನೋಭಾವ, ಮಕ್ಕಳನ್ನು ಲೈಂಗಿಕ ವಸ್ತುಗಳಂತೆ ಬಳಸಿಕೊಳ್ಳುವ ಮನಸ್ಥಿತಿಯುಳ್ಳ ಅತೃಪ್ತ ವಯಸ್ಕರು, ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳುವ ಸೈಕೊಪಾಥ್‌ಗಳಿಂದ ಮಕ್ಕಳು ದುರುಪಯೋಗಗೊಳಗಾಗುತ್ತಾರೆ.

**ಆರ್ಥಿಕ ಕಾರಣ**

ತಂದೆ–ತಾಯಿಯರ ಬಡತನ ಮತ್ತು ನಿರುದ್ಯೋಗ, ಮಕ್ಕಳ ಮೂಲಭೂತ ಅಗತ್ಯವನ್ನು ಪೂರೈಸಲಾಗದ ಪೋಷಕರ ಪರಿಸ್ಥಿತಿ, ಮಕ್ಕಳ ಕೈಯಲ್ಲಿ ಅತಿಯಾಗಿ ದುಡ್ಡು ಒದಗಿಸುವುದು, ಬಲವಂತದ ದುಡಿಮೆ ಅಥವಾ ಬಾಲಕಾರ್ಮಿಕತೆ, ತಂದೆ–ತಾಯಿಯರ ಸಾಲಕ್ಕೆ ಪ್ರತಿಯಾಗಿ ಮಕ್ಕಳನ್ನು ಜೀತಕ್ಕೆ ಸೇರಿಸುವುದು, ಮಕ್ಕಳ ವಿಲಾಸಿ ಜೀವನದ ಬಯಕೆ, ಬಡತನದಿಂದ ಮಕ್ಕಳನ್ನು ಸಾಕಲಾರದೆ ಮಾರಾಟ ಮಾಡುವುದು, ಕಡಿಮೆ ಸಂಬಳ ನೀಡಿ ಮಕ್ಕಳ ಶ್ರಮ ಬಳಸಿಕೊಳ್ಳುವುದು.

**ದೈಹಿಕ ಮತ್ತು ಮಾನಸಿಕ ಕಾರಣ**

ಮಕ್ಕಳು ವಾಸಿಯಾಗದ ಕಾಯಿಲೆಗಳಿಂದ ಬಳಲುತ್ತಿರುವುದು, ಜನ್ಮತಃ ಅಂಗವಿಕಲರಾಗಿರುವುದು, ಬುದ್ಧಿಮಾಂದ್ಯತೆಗೊಳಗಾಗಿರುವುದು, ಮಾನಸಿಕ ಕಾಯಿಲೆ ಅಥವಾ ಮನೋವಿಕಾರಗಳಿಂದ ಬಳಲುತ್ತಿರುವುದು, ಭಾವನಾತ್ಮಕವಾಗಿ ಬಳಲುವಿಕೆ ಅಥವಾ ಅತೃಪ್ತಿ, ಹಾಗೂ ದುಷ್ಟ ಮಾನಸಿಕ ಪ್ರೇರಣೆಯಂತಹ ಕಾರಣಗಳಿಂದ ಮಕ್ಕಳು ನಿರ್ಲಕ್ಷ್ಯಕ್ಕೊಳಗಾಗುತ್ತಾರೆ.

**ವೈಯಕ್ತಿಕ ಕಾರಣ**

ಮಕ್ಕಳ ಬೀಡಿ ಸಿಗರೇಟು ಸೇದುವುದು, ಅನೈತಿಕ ಲೈಂಗಿಕ ಸಂಬಂಧ, ಜೂಜಾಟ, ಮಧ್ಯವ್ಯಸನ, ಮಾದಕ ವ್ಯಸನದಂತಹ ದುರಾಭ್ಯಾಸಗಳು, ಮಗು ಶಾಲೆ ಬಿಟ್ಟು ಅಂಡಲೆಯುವುದು, ಹಾಗೂ ಮಗುವಿನ ಶಾಲೆಗಳ್ಳತನ ಜೊತೆಗೆ ನೈಸರ್ಗಿಕ ವಿಕೋಪಗಳು, ಪ್ರವಾಹ, ಬರ, ಚಂಡಮಾರುತ, ಜ್ವಾಲಾಮುಖಿ, ಯುದ್ಧ – ಶಸ್ತ್ರಾಸ್ತ್ರ ದಂಗೆ, ಭಯೋತ್ಪಾದಕ ಆಕ್ರಮಣದಂತಹ ಬಾಹ್ಯ ಅಂಶಗಳು ಕಾರಣವಾಗಿವೆ.

**ಮಕ್ಕಳು ಸಂತ್ರಸ್ತತೆ ಮತ್ತು ನಿರ್ಲಕ್ಷ್ಯತೆಕ್ಕೊಳಗಾದುದರ ಪರಿಣಾಮಗಳು**


ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಶೋಷಣೆಗೆ ಒಳಗಾಗುತ್ತಾರೆ. ಮಕ್ಕಳ ಬಾಲ್ಯವು ನಾಶವಾಗಿ ಮಕ್ಕಳ ವ್ಯಕ್ತಿತ್ವ ವಿಕಾಸವಾಗುವುದಿಲ್ಲ. ಮಕ್ಕಳು ಸಮಾಜದ ಬಗ್ಗೆ ವೈಷಮ್ಯ/ದ್ವೇಷದ ಮನೋಭಾವ ಬೆಳೆಸಿಕೊಳ್ಳುತ್ತಾರೆ. ಸಾಮಾಜಿಕ ನಿಯಮಗಳಿಗೆ ವಿರುದ್ಧವಾಗಿ ನಡೆಯಲು ಶುರು ಮಾಡುತ್ತಾರೆ. ಇದರಿಂದ

ಬಾಲಾಪರಾಧಿಗಳಾಗುತ್ತಾರೆ. ಅನಾರೋಗ್ಯಕರ ವಾತಾವರಣದಲ್ಲಿ ಜೀವಿಸಬೇಕಾಗುತ್ತದೆ ಇತರ ದುಷ್ಟಕೂಟದ ಒಡನಾಟದಲ್ಲಿ ಸೇರುತ್ತಾರೆ. ಮಕ್ಕಳು ಲೈಂಗಿಕವಾಗಿ ದುರುಪಯೋಗಕ್ಕೊಳಗಾಗುತ್ತಾರೆ. ಮಕ್ಕಳು ಕುಟುಂಬದಲ್ಲಿನ ಪ್ರೀತಿ–ಪ್ರೇಮ, ಮಮತೆಯ ಅರಿವಿಲ್ಲದೆ ಅನಾಥರಾಗಿ ಬೆಳೆಯುತ್ತಾರೆ. ಸಮಾಜದೊಂದಿಗೆ ಹೊಂದಾಣಿಕೆ ಇಂದ ಜೀವನ ಮಾಡಲು ಅಶಕ್ತರಾಗುತ್ತಾರೆ. ಹಸಿವು, ಅಪೌಷ್ಟಿಕತೆಯಿಂದ ಬಳಲುತ್ತಾರೆ. ಊಟಕ್ಕಾಗಿ ಭಿಕ್ಷಾಟನೆ ಮಾಡಲು ತೊಡಗುತ್ತಾರೆ. ಭಿಕ್ಷಾಟನೆ ಮಾಫಿಯಾಗಳಲಿ ಸಿಲುಕಬಹುದು. ಹೆಣ್ಣು ಮಕ್ಕಳಾಗಿದ್ದಲ್ಲಿ ಅವರನ್ನು ವೇಶ್ಯಾವೃತ್ತಿಗೆ ಬಳಸಿಕೊಳ್ಳುವರು. ಇದರಿಂದ ಮಕ್ಕಳು ದೈಹಿಕ ಮತ್ತು ಮಾನಸಿಕವಾಗಿ ಜರ್ಜರಿತರಾಗಿ ಮಾನಸಿಕ ಕಾಯಿಲೆಯಲ್ಲಿ ಬಳಲಬೇಕಾಗುತ್ತದೆ. ಏಡ್ಸ್‌ನಂತಹ ಮಾರಣಾಂತಿಕ ಕಾಯಿಲೆಗೂ ಬಲಿಯಾಗಬಹುದು. ಇಲ್ಲವೇ ಘಾತಕ ಶಕ್ತಿಗಳ ಕೈಯಲ್ಲಿ ಸಿಲುಕಿ ಮಾರಾಟಕ್ಕೊಳಗಾಗಬಹುದು. ಮಕ್ಕಳನ್ನು ಅಂಗಾಂಗ ಮಾರಾಟಕ್ಕಾಗಿ ಕೊಲ್ಲಬಹುದು.

**ಮಕ್ಕಳ ಆರೈಕೆ ಮತ್ತು ರಕ್ಷಣೆ**

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಘೋಷಣೆಯ ಪ್ರಕಾರ 18 ವರ್ಷ ವಯೋಮಾನ ಒಳಗಿರುವ ಯಾವುದೇ ವ್ಯಕ್ತಿಯನ್ನು ಮಕ್ಕಳು ಎಂದು ಪರಿಗಣಿಸಲಾಗುತ್ತದೆ. ಜಗತ್ತಿನ ಯಾವುದೇ ಪ್ರದೇಶ, ಜಾತಿ, ಮತ, ಭಾಷೆ, ಸಾಮಾಜಿಕ–ಆರ್ಥಿಕ ಪರಿಸ್ಥಿತಿಯನ್ನು ಲೆಕ್ಕಿಸದೆ ಎಲ್ಲಾ ಮಕ್ಕಳ ಸಾಮಾಜಿಕ ಭದ್ರತೆ ಮತ್ತು ಸುರಕ್ಷತೆಯನ್ನು ಕಾಪಾಡಬೇಕಾದುದು ಯಾವುದೇ ಸಮಾಜದ ಆದ್ಯ ಕರ್ತವ್ಯವಾಗಿದೆ. ಮಕ್ಕಳ ಆರೈಕೆ ಮತ್ತು ರಕ್ಷಣೆಯು "ಮಕ್ಕಳ ಮೇಲೆ ಗಣನೀಯವಾಗಿ ಪರಿಣಾಮ ಬೀರುವ ಯಾವುದೇ ದುರುಪಯೋಗ, ನಿರ್ಲಕ್ಷ್ಯ, ಶೋಷಣೆ ಮತ್ತು ಹಿಂಸಾಚಾರವನ್ನು ತಡೆಗಟ್ಟಲು ಮತ್ತು ಪ್ರತಿಕ್ರಿಯಿಸಲು ಸೂಕ್ತ ಕ್ರಮಗಳು ಮತ್ತು ರಚನೆಗಳಾಗಿವೆ"

**ಮಕ್ಕಳ ಆರೈಕೆ ಮತ್ತು ಸಂರಕ್ಷಣೆ ಒಳಗೊಳ್ಳುವ ಅಂಶಗಳು**



**ಸರ್ಕಾರಿ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುವ ಮಕ್ಕಳ ಸಮಸ್ಯೆಗಳು**

ರಾಜ್ಯ ರಾಜಧಾನಿ ಬೆಂಗಳೂರಿಗೆ ಅತಿ ಸಮೀಪದಲ್ಲಿರುವ ಜಿಲ್ಲೆ ಚಿಕ್ಕಬಳ್ಳಾಪುರ ಜಿಲ್ಲೆಯ ಸರಕಾರಿ ಬಾಲಕಿಯರ ಬಾಲಮಂದಿರದಲ್ಲಿ ಲೈಂಗಿಕ ದೌರ್ಜನ್ಯಗೊಳಗಾಗಿ ಸಂತ್ರಸ್ತಳಾಗಿರುವ ಬಾಲಕಿಯನ್ನು ಬಾಲಮಂದಿರದ ಭದ್ರತಾ ಸಿಬ್ಬಂದಿಯೇ ಮತ್ತೆ ವೇಶ್ಯಾವಾಟಿಕೆಗೆ ದೂಡಿರುವ ಪ್ರಕರಣ[2] ಬೆಳಕಿಗೆ ಬಂದಿತ್ತು. ಬಾಲಮಂದಿರದ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದಾಗಿಯೇ ಬಾಲಕಿಯರನ್ನು ವೇಶ್ಯಾವಾಟಿಕೆಗೆ ಬಳಸಿರುವುದು ಕಂಡುಬಂದಿದೆ. ಇದೇ ರೀತಿ ಪ್ರಕರಣವೊಂದು ಉತ್ತರ ಪ್ರದೇಶದಲ್ಲಿ ಕಂಡು ಬಂದು ದೇಶವೇ ಬೆಚ್ಚಿಬೀಳುವಂತೆ ಮಾಡಿತ್ತು. ಮಕ್ಕಳ ಹಕ್ಕುಗಳಿಗೆ ಬೆಂಗಾವಲಾಗಿ ಇರಬೇಕಾದ ಸರ್ಕಾರಿ ವ್ಯವಸ್ಥೆಯೇ ಮಗುವನ್ನು ಅಪಾಯಕ್ಕೆ ದೂಡುವಂತೆ ಮಾಡಿದ್ದು, ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ. ನಾಗರೀಕ ಸಮಾಜ ತಲೆ ತಗ್ಗಿಸುವ ಘಟನೆ ಇದಾಗಿದೆ.

**ಬಾಲಮಂದಿರಗಳಲ್ಲಿನ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುವ ಮಕ್ಕಳ ಮಾದಕ ವ್ಯಸನ.**

ರಾಮನಗರದ ಸರ್ಕಾರಿ ಬಾಲಕಿಯರ ಬಾಲಮಂದಿರದಲ್ಲಿ 8 ಮಕ್ಕಳು 20 ಅಡಿ ಎತ್ತರದ ಆವರಣದ ಗೋಡೆ ಹಾರಿ ತಪ್ಪಿಸಿಕೊಂಡಿದ್ದರು[3]. ಬಾಲಮಂದಿರದಲ್ಲಿ ತಪ್ಪಿಸಿಕೊಳ್ಳಲು ಮೂಲಸೌಕರ್ಯಗಳ ಕೊರತೆ ಮತ್ತು ಪ್ರೀತಿಯ ಕೊರತೆ ಎಂದು ಮೊದಲಿಗೆ ದೂರಲಾಗಿತ್ತು. ಆದರೆ ಮಕ್ಕಳು ಡ್ರಗ್ ಚಟಕ್ಕೆ ಬಲಿಯಾಗಿದ್ದರು ಎಂಬ ಸತ್ಯಾಂಶ ಹೊರಬಿದ್ದಿದೆ. ಸೈಕಲ್ ಸಲ್ಯೂಷನ್, ಲಿಪಸ್ಟಿಕ್, ವೈಟನರ್, ಪೆಟ್ರೋಲ್, ಪಾನ್ ಪರಾಗ್ ಹೀಗೆ ಅಂಗಡಿಯಲ್ಲಿ ಸುಲಭವಾಗಿ ಸಿಗುವ ವಸ್ತುಗಳನ್ನು ಸೇವಿಸಿ ಅಮಲಿನಲ್ಲಿ ತೇಲಾಡುತ್ತಿದ್ದರು ಎಂಬ ವಿಚಾರ ತಿಳಿದುಬಂದಿದೆ. ಬಾಲಮಂದಿರಕ್ಕೆ ಬರುವ ಮುಂಚೆಯೇ ಡ್ರಗ್ ಚಟಕ್ಕೆ ಬಲಿಯಾಗಿರುತ್ತಾರೆ, ಬಾಲಮಂದಿರದಲ್ಲಿ ಕ್ಷಣಿಕ ಸುಖ ತೃಪ್ತಿಪಡಿಸಿಕೊಳ್ಳಲಾಗದೆ ತಪ್ಪಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ. ರಾಜ್ಯದ ಬಹುತೇಕ ಬಾಲಮಂದಿರದಲ್ಲಿ ಇದೇ ಪರಿಸ್ಥಿತಿ ಇದೆ ಎಂದು ಹೇಳಲಾಗುತ್ತದೆ.

**ಮೂಲಭೂತಸೌಕರ್ಯಗಳ ಕೊರತೆಯಿಂದಾಗಿ ಅನಾರೋಗ್ಯಕರ ವಾತಾವರಣದಲ್ಲಿ ವಾಸಿಸುತ್ತಿರುವ ಮಕ್ಕಳು.**

ರಾಜ್ಯದ ಬಹುತೇಕ ಸರ್ಕಾರಿ ಬಾಲಮಂದಿರಗಳು ಸ್ವಂತ ಸೂರಿಲ್ಲದೆ ಬಾಡಿಗೆ ಮನೆಗಳಲ್ಲಿ ಬಾಲಮಂದಿರಗಳನ್ನು ನಡೆಸುತ್ತಿವೆ. ಇದರಿಂದ ಮಕ್ಕಳ ಮೂಲಭೂತ ಅಗತ್ಯಗಳು ಪೂರೈಕೆಯಾಗುತ್ತಿಲ್ಲ. ಸಾಮರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಆ ಬಾಡಿಗೆ ಮನೆಯಲ್ಲಿ ಇರಿಸಾಗುತ್ತಿದೆ. ಇದರಿಂದ ಮಕ್ಕಳ ವಾಸಸ್ಥಳವು ಹಂದಿಗೂಡಿನಂತೆ ಅನಾರೋಗ್ಯಕರ ವಾತಾವರಣವಾಗಿದೆ. ಕೊಪ್ಪಳ ಜಿಲ್ಲೆಯ ಸರಕಾರಿ ಬಾಲಕರ ಬಾಲಮಂದಿರವು ಬಾಡಿಗೆ ಮನೆಯಲ್ಲಿ ನಡೆಸಲಾಗುತ್ತಿದ್ದು, ಅಗತ್ಯ ಮೂಲಸೌಕರ್ಯದಿಂದ ವಂಚಿತರಾಗಿ ಮಕ್ಕಳು ಅತ್ಯಂತ ಕಷ್ಟದಿಂದ ವಾಸಿಸುತ್ತಿರುವುದರ ಕುರಿತು ಈ ಹಿಂದಿನ ಪತ್ರಿಕಾ ವರದಿ[4] ಬೆಳಕು ಚೆಲ್ಲುತ್ತದೆ.

---

[2] ತಲೆತಗ್ಗಿಸುವ ಘಟನೆ. (ಏಪ್ರೀಲ್ 1, 2019). ವಿಜಯ ಕರ್ನಾಟಕ ಪತ್ರಿಕೆ, ಬೆಂಗಳೂರು.

[3] ಶಮಿಲಾ.ಬಿ. (ಸೆಪ್ಟೆಂಬರ್ 23, 2020). ಬಡಮಕ್ಕಳನ್ನು ಕಿತ್ತು ತಿನ್ನುತ್ತಿದೆ ಮಾದಕ ವ್ಯಸನ: ಬಾಲಮಂದಿರದ ಅನಾಥ ಮಕ್ಕಳಿಗೂ ಡ್ರಗ್ ಚಟ. ವಿಜಯ ಕರ್ನಾಟಕ ದಿನಪತ್ರಿಕೆ, ಬೆಂಗಳೂರು.

[4] ಬಾಲಮಂದಿರಕ್ಕೆ ಸೌಲಭ್ಯ ಮರೀಚಿಕೆ. (ಜುಲೈ 6, 2015). ವಿಜಯ ಕರ್ನಾಟಕ ದಿನಪತ್ರಿಕೆ, ಬೆಂಗಳೂರು.

ಮುರುಕು ಟ್ರಂಕ್, ಸರಿಯಾದ ಕಿಟಕಿಗಳಿಲ್ಲದ ಕೊಠಡಿಗಳು, ಬಾಲಮಂದಿರದ ಸುತ್ತ ಜಾಲಿಗಿಡ ಬೆಳೆದು ವಿಷಜಂತುಗಳ ಭಯ, ಕಳಪೆ ಗುಣಮಟ್ಟದ ಆಹಾರ, ಮಕ್ಕಳು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಬಿಡದ ಸಿಬ್ಬಂದಿ. ಇಲ್ಲಿ ಮಕ್ಕಳ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾದುದ್ದನ್ನು ಗಮನಿಸಬಹುದು. ಅಲ್ಲದೆ ಮತ್ತೊಂದು ನಿದರ್ಶನವಾಗಿ ಸಂತ್ರಸ್ತ ಹೆಣ್ಣು ಮಕ್ಕಳಿಗೆ ಆಶ್ರಯ ನೀಡುವ ಶಿವಮೊಗ್ಗ ಜಿಲ್ಲೆಯ ಬಾಲಕಿಯರ ಬಾಲಮಂದಿರಕ್ಕೆ ಸ್ವಂತ ಕಟ್ಟಡವಿಲ್ಲದೆ ಖಾಸಗಿ ಮನೆಯಲ್ಲಿ ಬಾಲಮಂದಿರ ನಡೆಸಲಾಗುತ್ತಿದೆ [5] ಸಾಮರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಈ ಖಾಸಗಿ ಸೂರಿನಲ್ಲಿ ಇರಿಸಕೊಳ್ಳಲಾಗದು, ಇದರಿಂದ ಅವಶ್ಯ ಮೂಲಭೂತ ಸೌಕರ್ಯಗಳ ಕೊರತೆ ಎದುರಾಗಿದೆ.

**ಬಾಲಮಂದಿರದ ಅಧಿಕಾರಿಗಳಿಂದ ಮಕ್ಕಳ ಮೇಲಿನ ಕಿರುಕುಳ ಮತ್ತು ಬಲವಂತದ ದುಡಿಮೆ.**

ಖಾನಾಪುರ ಸರ್ಕಾರಿ ಬಾಲಕರ ಬಾಲಮಂದಿರದ ಅಧಿಕಾರಿ ಮತ್ತು ಸಿಬ್ಬಂದಿಗಳು ಮಕ್ಕಳಿಂದ ಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಬಲವಂತವಾಗಿ ಸ್ವಚ್ಛಗೊಳಿಸುತ್ತಿದ್ದಾರೆ ಎಂದು ಸ್ಥಳೀಯರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ದೂರು ನೀಡಿದ್ದಾರೆ. ಪ್ರತಿರೋಧ ಒಡ್ಡಿದ ಮಕ್ಕಳಿಗೆ ಊಟ ತಿಂಡಿ ನೀಡದೆ ಕಿರುಕುಳ[6] ನೀಡಿದ್ದಾರೆ.

**ಬಂಗಾರದ ಪಂಜರವಾಗುತ್ತಿರುವ ಸರ್ಕಾರಿ ಬಾಲಮಂದಿರಗಳು**

ಮೈಸೂರಿನ ಸರ್ಕಾರಿ ಬಾಲಕರ ಮಂದಿರದಿಂದ ಮೂವರು ಬಾಲಕರು ನಾಪತ್ತೆಯಾಗಿದ್ದರು[7]. ಶಾಲೆಗೆ ಹೋದ ಸಂದರ್ಭದಲ್ಲಿ ಬ್ಯಾಗ್ ಅನ್ನು ಶಾಲೆಯಲ್ಲೇ ಬಿಟ್ಟು ಪರಾರಿಯಾಗಿದ್ದರು. ಇದೇ ರೀತಿ ರಾಜ್ಯದ ಹಲವಾರು ಬಾಲಮಂದಿರಗಳಲ್ಲಿ ಮಕ್ಕಳ ನಾಪತ್ತೆ ಪ್ರಕರಣಗಳು[8] ಕಂಡು ಬಂದಿವೆ. ಮಕ್ಕಳು ಸ್ವಚ್ಛಂದವಾಗಿ ಹಾರುವ ಹಕ್ಕಿಗಳಂತೆ ಅವರನ್ನು ಮುಕ್ತ ವಾತಾವರಣದಲ್ಲಿ ಬೆಳೆಸಬೇಕು. ಆದರೆ ಎಲ್ಲಾ ಸೌಲಭ್ಯಗಳಿರುವ ಬಂದೀಖಾನೆ ಮಾದರಿಯ ಸರ್ಕಾರಿ ಬಾಲಮಂದಿರಗಳಲ್ಲಿ ಮಕ್ಕಳ ವ್ಯಕ್ತಿತ್ವ ವಿಕಾಸವಾಗಲಾರದು. ಕೆಲವೊಮ್ಮೆ ಹಿತಮಿತವಾದ ನಿಯಂತ್ರಣ ಮತ್ತು ನೈತಿಕ ತತ್ವಗಳಡಿಯಲ್ಲಿ ಸಾಮಾಜೀಕರಣಗೊಳಿಸಬೇಕಾದದ್ದು ಅತ್ಯಂತ ಅವಶ್ಯವಾಗಿದೆ. ಇಲ್ಲವಾದಲ್ಲಿ ಬಾಲಮಂದಿರಗಳು ಬಂಗಾರದ ಪಂಜರವಾಗಬಹುದು.

**ಸರ್ಕಾರಿ ಬಾಲಮಂದಿರಗಳಲ್ಲಿ ಕಳಪೆ ಗುಣಮಟ್ಟದ ಆಹಾರ.**

ರಾಜ್ಯದ ಹಲವೆಡೆ ಬಾಲಮಂದಿರದಲ್ಲಿ ಮಕ್ಕಳಿಗೆ ನೀಡುವ ಆಹಾರವು ಗುಣಮಟ್ಟವಿಲ್ಲದಾಗಿರುತ್ತದೆ ಅಥವಾ ಹೊರಗಿನಿಂದ ನೀಡುವ ಆಹಾರವು ವಿಷಪೂರಿತವಾಗಿ ಮಕ್ಕಳು ಆಸ್ಪತ್ರೆ ಸೇರುವಂತಾಗುತ್ತಿದೆ. ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆ ಸಮೀಪವಿರುವ ಬಾಲಕರ ಬಾಲಮಂದಿರದಲ್ಲಿ ರಾತ್ರಿ ಆಹಾರ ಸೇವಿಸಿ

[5] ಸರಕಾರಿ ಬಾಲಮಂದಿರಕ್ಕೆ ಖಾಸಗಿ ಸೂರು, (ಜುಲೈ 25, 2019). ವಿಜಯ ಕರ್ನಾಟಕ ದಿನಪತ್ರಿಕೆ, ಬೆಂಗಳೂರು.

[6] ಬಾಲಮಂದಿರ ಅಧಿಕಾರಿ, ಸಿಬ್ಬಂದಿ ವಿರುದ್ಧ ದೂರು. (ಏಪ್ರೀಲ್ 27, 2018). ವಿಜಯ ಕರ್ನಾಟಕ ದಿನಪತ್ರಿಕೆ. ಬೆಂಗಳೂರು.

[7] ಲೋಕೇಶ್ ನೀರಬಿದಿರೆ. (ಜುಲೈ 14, 2015). ಬಾಲಮಂದಿರ ಮೂವರು ಬಾಲಕರು ನಾಪತ್ತೆ. ವಿಜಯ ಕರ್ನಾಟಕ ದಿನಪತ್ರಿಕೆ, ಬೆಂಗಳೂರು.

[8] ರವಿಕಿರಣ್,ವಿ. (ಜುಲೈ 17, 2020). ಪ್ರೀತಿಗೆ ಹಂಬಲಿಸಿ ಪರಾರಿಯಾದವೇ ಮಕ್ಕಳು?. ವಿಜಯಕರ್ನಾಟಕ, ಬೆಂಗಳೂರು.

ನೂರಕ್ಕು ಹೆಚ್ಚು ಮಂದಿ ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ ಘಟನೆ[9] ಈ ಹಿಂದೆ ನಡೆದಿತ್ತು. ಆಹಾರವೂ ವಿಷಮಯಗೊಂಡಿರುವ ಸಾಧ್ಯತೆ ಇದೆ ಎಂದು ಅಹಾರವನ್ನು ಲ್ಯಾಬ್‌ಗೆ ಕಳುಹಿಸಲಾಗಿ ವಿಷಗೊಂಡಿರುವುದು ಖಾತ್ರಿಯಾಗಿತ್ತು. ಈ ಹಿಂದೆ ಹೀಗೆ ಮಕ್ಕಳಿಗೆ ಮದುವೆ, ಹೋಟೆಲ್‌ನಲ್ಲಿ ಉಳಿದ ಆಹಾರ ನೀಡಿ ಅಸ್ವಸ್ಥರಾದ ಘಟನೆಗಳು ನಡೆದ ಮೇಲೆ ಮಕ್ಕಳ ಕಲ್ಯಾಣ ಸಮಿತಿ ಈ ನಿರ್ಣಯ[10] ಕೈಗೊಂಡಿದೆ. ಮಕ್ಕಳಿಗೆ ಕೊಡುವ ಎಲ್ಲಾ ಸಮಯದ ಊಟ ಮತ್ತು ತಿನಿಸ್ಸನ್ನು ಆಯಾ ಸಂಸ್ಥೆಯ ಮೇಲ್ವಿಚಾರಕರ ಉಸ್ತುವಾರಿಯಲ್ಲಿಯೇ ತಯಾರಿಸಿ ನೀಡಬೇಕೆಂದು ಬಾಲಮಂದಿರದ ಮಕ್ಕಳಿಗೆ ಬಾಲ ನ್ಯಾಯ ಕಾಯ್ದೆ 2015ರ ಸೆಕ್ಷನ್ 3(6), 29(1) ಮತ್ತು 30 (6), (18) ಅಡಿಯಲ್ಲಿ ಸಮಿತಿ ಸೂಚನೆ ನೀಡಿದೆ.

**ಪ್ರೀತಿ–ವಿಶ್ವಾಸ ಮತ್ತು ಕೌಟುಂಬಿಕ ವಾತಾವರಣದ ಕೊರತೆ.**

ಸರ್ಕಾರಿ ಬಾಲಮಂದಿರಗಳಲ್ಲಿ ಕೆಲಸ ಮಾಡುವ ಅಧಿಕಾರಿ ಮತ್ತು ಸಿಬ್ಬಂದಿಗಳು ಮಕ್ಕಳನ್ನು ಪ್ರೀತಿ–ವಿಶ್ವಾಸದಿಂದ ನೋಡಿಕೊಳ್ಳಲು ವಿಫಲರಾಗುತ್ತಿದ್ದಾರೆ. ಅಲ್ಲದೇ ಮಕ್ಕಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಸರ್ಕಾರಿ ಬಾಲಮಂದಿರಗಳು ಒದಗಿಸಿದರೂ ಮಗುವಿನ ವ್ಯಕ್ತಿತ್ವದ ವಿಕಾಸಕ್ಕೆ ಬೇಕಾದ ಪ್ರೀತಿ, ಮಮತೆ, ನೈತಿಕ ಸ್ಥೈರ್ಯ ತುಂಬಬಲ್ಲ ಕುಟುಂಬದ ದೊಡ್ಡ ಕೊರತೆ ಇದೆ. ಇದರಿಂದ ಮಕ್ಕಳು ಸಂವೇಧನಾ ರಹಿತರಾಗಿ ಬೆಳೆಯುತ್ತಾರೆ. ಸಮಾಜದ ಕುರಿತು ದ್ವೇಷ ಮತ್ತು ತಿರಸ್ಕಾರ ಬೆಳೆಸಿಕೊಳ್ಳತ್ತಾರೆ.

**ಸರ್ಕಾರಿ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುವ ಮಕ್ಕಳ ಸಮಸ್ಯೆಗಳಿಗೆ ಪರಿಹಾರಗಳು**

- ಸರ್ಕಾರಿ ಬಾಲಮಂದಿರಗಳನ್ನು ಮಕ್ಕಳ ಸ್ನೇಹಿ ಮನೆಯಾಗಿ ಪರಿವರ್ತಿಸಿ, ಸುಸಜ್ಜಿತ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. ಮಕ್ಕಳ ಕುರಿತು ಸಂವೇದನಶೀಲರಾದ ಸಂಪನ್ಮೂಲ ವ್ಯಕ್ತಿಗಳನ್ನು ಸರ್ಕಾರಿ ಬಾಲಮಂದಿರಗಳ ಮುಖ್ಯಸ್ಥರಾಗಿ ನೇಮಿಸುವುದು.
- ಸರ್ಕಾರಿ ಬಾಲಮಂದಿರದಲ್ಲಿನ ಮೂಲಭೂತ ಸೌಕರ್ಯ ಮತ್ತು ಆಹಾರದ ಗುಣಮಟ್ಟವನ್ನು ಸ್ಥಳೀಯ ಸಂಘ–ಸಂಸ್ಥೆಗಳಿಂದ (ಮಕ್ಕಳ ಹಕ್ಕುಗಳ ಕುರಿತು ಕಾರ್ಯನಿರ್ವಹಿಸುವ) ವಾರಕೊಮ್ಮೆ ಮೇಲ್ವಿಚಾರಣೆ ನಡೆಸುವುದು.
- ಸರ್ಕಾರಿ ಬಾಲಮಂದಿರಗಳಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳ ನೇಮಕಾತಿ ಮಾಡಿಕೊಳ್ಳುವಲ್ಲಿ ಅಭ್ಯರ್ಥಿಯ ವ್ಯಕ್ತಿತ್ವದ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಮತ್ತು ಅಭ್ಯರ್ಥಿಯು ಮಕ್ಕಳ ಕುರಿತಾಗಿ ಹೊಂದಿರುವ ಮನೋಭಾವವನ್ನು ನಿರ್ಧಿಷ್ಟ ಮನೋವೈಜ್ಞಾನಿಕ ಮಾನದಂಡಗಳಿಂದ ಮೌಲ್ಯಮಾಪನ ಮಾಡಿ ನೇಮಿಸಿಕೊಳ್ಳಬೇಕು.

---

[9] ರಾತ್ರಿ ಊಟ ಸೇವಿಸಿದ ಬಾಲಮಂದಿರದ 100ಕ್ಕೂ ಅಧಿಕ ಮಕ್ಕಳು ಅಸ್ವಸ್ಥ. (ಡಿಸೆಂಬರ್ 31, 2018), ವಿಜಯ ಕರ್ನಾಟಕ ದಿನಪತ್ರಿಕೆ, ಬೆಂಗಳೂರು.

[10] ಮಕ್ಕಳ ಪಾಲನಾ ಕೇಂದ್ರಗಳಿಗೆ ಹೊರಗಿನ ಆಹಾರ ನಿರ್ಬಂಧ. (ಜನವರಿ 6, 2019). ವಿಜಯ ಕರ್ನಾಟಕ, ದಿನಪತ್ರಿಕೆ.

- ಸರ್ಕಾರಿ ಬಾಲಮಂದಿರಗಳಲ್ಲಿ ಮಕ್ಕಳಲ್ಲಿ ಇರುವ ಮಧ್ಯಪಾನ, ಧೂಮಪಾನ, ಮತ್ತು ಮಾದಕವ್ಯಸನದಂತಹ ಕೆಟ್ಟ ಹವ್ಯಾಸವನ್ನು ಗುರುತಿಸಿ, ಮಕ್ಕಳನ್ನು ಪುನಶ್ಚೇತನ ಶಿಬಿರಗಳಿಗೆ ಸೇರಿಸುವುದು.
- ಸರ್ಕಾರಿ ಬಾಲಮಂದಿರದಿಂದ ಶಾಲೆಗೆ ತೆರಳುವ ಮಕ್ಕಳ ನಡುವಳಿಕೆಯ ಮೇಲೆ ಅಧಿಕಾರಿ ಸಿಬ್ಬಂದಿಗಳು ನಿಗಾವಹಿಸುವುದು ಮತ್ತು ಶಾಲೆಗಳಿಗೆ ತೆರಳಿ ಮಗುವಿನ ವ್ಯಕ್ತಿತ್ವ ಬೆಳವಣಿಗೆಯ ಕುರಿತು ಹಿಮ್ಮಾಹಿತಿ ಪಡೆವುದು ಹಾಗೂ ಮಕ್ಕಳ ಶೈಕ್ಷಣಿಕ ಪ್ರಗತಿ ಪರಿಶೀಲನೆ ಮಾಡುವುದು.
- ಮಕ್ಕಳಲ್ಲಿ ಒಳ್ಳೆಯ ಹವ್ಯಾಸ ಬೆಳೆಸಲು ವ್ಯಕ್ತಿತ್ವ ವಿಕಾಸ ತರಬೇತಿ ಮತ್ತು ರಂಗಭೂಮಿ ಚಟುವಟಿಕೆಗಳನ್ನು ಸರ್ಕಾರಿ ಬಾಲಮಂದಿರಗಳಲ್ಲಿ ಆಯೋಜಿಸುವುದು.
- ಸರ್ಕಾರಿ ಬಾಲಮಂದಿರಗಳನ್ನು ವಯೋಮಾನವಾರು ಮಕ್ಕಳನ್ನು ವಿಂಗಡಿಸುವುದು. ಉದಾ: ಆರು ವರ್ಷದೊಳಗಿನ, 6ರಿಂದ 11, 12 ರಿಂದ 18.
- ಸರ್ಕಾರಿ ಬಾಲಮಂದಿರದ ಮಕ್ಕಳನ್ನು ಹಿರಿಯರ ಅನಾಥಾಲಯ ಅಥವಾ ವೃದ್ಧಾಶ್ರಮದ ಹಿರಿಯರೊಟ್ಟಿಗೆ ಬೆರೆಯಲು ಅವಕಾಶ ಕಲ್ಪಿಸಿ, ಮಕ್ಕಳಿಗೆ ಪ್ರೀತಿ, ಮಮತೆ, ಕೌಟುಂಬಿಕ ವಾತಾವರಣವನ್ನು ಒದಗಿಸುವುದು. ಅಲ್ಲದೆ ಪೋಷಕತ್ವ ಯೋಜನೆಯಡಿ ಅರ್ಹ ಕುಟುಂಬಗಳಿಗೆ ಮಕ್ಕಳನ್ನು ತಾತ್ಕಾಲಿಕ ದತ್ತು ನೀಡುವುದು.
- ಬಾಲಮಂದಿರಗಳಲ್ಲಿ ನಡೆಯುವ ಮಕ್ಕಳ ವಿರುದ್ಧದ ದೌರ್ಜನ್ಯಗಳನ್ನು ತಡೆಯಲು ಮಕ್ಕಳನ್ನೊಳಗೊಂಡ ಕಣ್ಗಾವಲು ಸಮಿತಿಯನ್ನು ರೂಪಿಸುವುದು ಹಾಗೂ ಸಹಾಯವಾಣಿ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು.
- ಮಕ್ಕಳನ್ನು ಇಚ್ಛೆಪಟ್ಟ ಕುಟುಂಬಗಳಿಗೆ ಆರೈಕೆಗಾಗಿ ತಾತ್ಕಾಲಿಕವಾಗಿ ನೀಡುವ ಪೋಷಕತ್ವ ಯೋಜನೆಯಲ್ಲಿನ ಸಮಸ್ಯೆಗಳನ್ನು ನಿವಾರಿಸಿ, ಸರಿಯಾಗಿ ಅನುಷ್ಠಾನಗೊಳಿಸುವುದು.
- ಸರ್ಕಾರಿ ಬಾಲಮಂದಿರಗಳಿಂದ ಮಕ್ಕಳನ್ನು ತಮ್ಮ ಕುಟುಂಬಗಳಲ್ಲಿ ಪುನ: ಸ್ಥಾಪಿಸುವಲ್ಲಿ ಅಧಿಕಾರಿಗಳು ಹೆಚ್ಚಿನ ಪ್ರಯತ್ನ ಮಾಡಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಮಕ್ಕಳ ಕಲ್ಯಾಣದ ಕುರಿತಾಗಿ ಅಧಿಕಾರಿಗಳ ಸಾಧನೆಯನ್ನು ಗುರುತಿಸಿ, ಪ್ರೋತ್ಸಾಹಿಸಬೇಕು.

**ಉಪಸಂಹಾರ**

ಭಾರತದಲ್ಲಿ ಮಕ್ಕಳನ್ನು ದೇವರೆನ್ನುತ್ತಲ್ಲೇ ಬಾಲ್ಯವಿವಾಹ ಮಾಡಲಾಗುತ್ತದೆ, ದೇವದಾಸಿ ಪದ್ಧತಿಗೆ ದೂಡಲಾಗುತ್ತದೆ, ದುಡಿಯಲು ಹಾಕುತ್ತಾರೆ. ಮಕ್ಕಳಿಗೆ ಏನು ಬೇಕೆನ್ನುವುದನ್ನು ಸ್ವತ: ತಂದೆ–ತಾಯಿಗಳೇ ನಿರ್ಧರಿಸುತ್ತಾರೆ, ಮಕ್ಕಳನ್ನು ತಾತ್ಸಾರ ಮಾಡಿ ಕಸದ ತೊಟ್ಟಿಯಲ್ಲಿ ಬಿಸಾಡಿ ಹೋಗುತ್ತಾರೆ. ಹೀಗೆ ಸಂಸ್ಕೃತಿ, ಸಂಸ್ಕಾರದ ಹೆಸರಿನಲ್ಲಿ ಮಕ್ಕಳ ಕನಸುಗಳನ್ನು ಕಿತ್ತುಕೊಳ್ಳುವ ಸಮಾಜದ ನಡೆ ಒಂದೆಡೆಯಾದರೆ ಮಕ್ಕಳೆಂದರೆ ನಾಳೆ ಎನ್ನುವ ತಾತ್ಸಾರ ಮನೋಭಾವ ಸಮಾಜದ ಮತ್ತೊಂದೆಡೆಯಿದೆ. ಇದೆಲ್ಲವೂ ಬದಲಾಗಿ

ಮಕ್ಕಳೆಂದರೆ ಪ್ರಸ್ತುತದವರು ಎಂಬ ಮನೋಭಾವ ಜನಸಾಮಾನ್ಯರಲ್ಲಿ ಮೂಡಬೇಕಿದೆ. ಮಕ್ಕಳು ತಮ್ಮ ಕನಸುಗಳನ್ನು ಹೆಣೆದು ನನಸು ಮಾಡಿಕೊಳ್ಳಲು ಸಾಮಾಜಿಕ ವ್ಯವಸ್ಥೆ ಬೆಂಗಾವಲಾಗಿ ನಿಲ್ಲಬೇಕಿದೆ. ಹಾಗಾದಾಗ ಮಾತ್ರ ಆರೋಗ್ಯ ಪೂರ್ಣ ಸಮಾಜವೊಂದು ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಬಹುಶಃ ಅಂತಹ ಸಮಾಜದಲ್ಲಿ ಬಾಲಮಂದಿರಗಳ ಪ್ರಾಮುಖ್ಯತೆ ಕಡಿಮೆಯಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- Sreepriya. C. K. (2008). Problems in the Administration of Social Welfare Programmes in Kerala: A Study With Reference To Institutional Services for Children In Need Of Care and Protection. Unpublished Ph.D thesis, Mahatma Gandhi University, Kottayam.
- Tiwari B. N., Sunitha Bhaskar, Richa Shanker, Shrikant Kale, Soumya P Kumar, Ravi Kumar (2018). Children in India 2018 - A Statistical Appraisal. Ministry of Statistics and Programme Implementation, Govt. of India. New Delhi.
- ಕರ್ನಾಟಕ ಆರ್ಥಿಕ ಸಮೀಕ್ಷೆ 2019–20. (2020) ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
- ಜನಾರ್ಧನ ಎನ್.ಪಾರ್ಥಸಾರಥಿ ಆರ್.ಮುರಳೀಧರ್ಡಿ., ಶೇಖರ್ಕೆ., ಶೇಷಾದ್ರಿ, (2009). ಕಷ್ಟಕರ ಸನ್ನಿವೇಶದಲ್ಲಿರುವ ಮಕ್ಕಳಿಗಾಗಿ ಮನೋಸಾಮಾಜಿಕ ಆರೈಕೆ: ಒಂದು ಕೈಪಿಡಿ, ನಿಮಾನ್ಸ್, ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ. ಬೆಂಗಳೂರು.
- ಪ್ರಕಾಶ್ ಕೆ ಕೆ. (2013). ಸುಧಾರಣಾ ಸಂಸ್ಥೆಗಳಲ್ಲಿನ ರಕ್ಷಣೆ ಮತ್ತು ಪೋಷಣೆಗೆ ಒಳಪಟ್ಟ ಮಕ್ಕಳ ಶೈಕ್ಷಣಿಕ ಕಾರ್ಯಸ್ಥಿತಿಗಳ ಮತ್ತು ಪುನರ್ವಸತಿ ಅವಕಾಶಗಳ ಚಾರಿತ್ರಿಕ ಅಧ್ಯಯನ. ಅಪ್ರಕಟಿತ ಪೌಢಪ್ರಬಂಧ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ.
- ಬಾಬುರಾಜ್ ಪಿ.ಪಿ. (2013). ಮಕ್ಕಳ ರಕ್ಷಣೆ ಮತ್ತು ಬಾಲನ್ಯಾಯ ವ್ಯವಸ್ಥೆ. ಪೀಪಲ್ಸ್ ಲೀಗಲ್ ಫೋರಂ ಪ್ರಕಾಶನ, ಮೈಸೂರು.
- ವಾರ್ಷಿಕ ವರದಿ 2018–19. (2019), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.